**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

ದಿಃ04.12.2008 ರಂದು ರಿಜಿಸ್ಟರ್ ಕ್ರಯಪತ್ರ ಆಗಿದೆ ಅಂತ ಹೇಳಿದ್ದು ಅಂದಿನಿಂದ ಇಲ್ಲಿಯತನಕ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿಗೆ ಆಗಿದೆಯಾ ಎಂದರೆ

ಹೌದು. ದಿಃ04.12.2008 ರಿಂದ ನಂತರ ಮ್ಯೂಟೇಶನ್ ದಾಖಲೆ ಮತ್ತು ಕಂದಾಯ ದಾಖಲೆ ನನ್ನ ತಂದೆ ಹೆಸರಿಗೆ ಬಂದಿತ್ತಾ ಎಂದರೆ ಹೌದು. ದಿಃ04.12.2008 ರಿಂದ ನಂತರ ಪಹಣಿ ದಾಖಲೆ ನನ್ನತಂದೆ ಹೆಸರಿಗೆ ಬಂದಿತ್ತಾ ಎಂದರೆ 2020 ರಿಂದ ನನ್ನ ತಂದೆ ಹೆಸರಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ. 2020 ರ ಹಿಂದಿನ ಸಾಲಿನ ಆರ್ ಟಿಸಿ ಗಳು ನನ್ನ ತಂದೆ ಹೆಸರಿಗೆ ಇದೆಯಾ ಎಂದರೆ ಇಲ್ಲ. ಸರ್ವೆ ಮಾಡಲು ನೀಡಿದ ಅರ್ಜಿ ಇದೆಯಾ ಎಂದರೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾಕ್ಷಿ ಐದಾರು ಬಾರಿ ಅಳತೆಗೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. 2018 ಸಾಲಿನಲ್ಲಿ ಸರ್ವೆ ರವರು ನಮಗೆ ನೋಟೀಸು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು. ಸರ್ವೆ ರವರು ನೀಡಿದ ನೋಟೀಸು ನಲ್ಲಿ ಹಕ್ಕುದಾರರ ಹೆಸರು ದಾಸಪ್ಪ ಅಂತ ಇದೆ ಎಂದರೆ ನನಗೆ ಗೊತ್ತಿಲ್ಲ ನನ್ನ ತಂದೆಯವರಿಗೆ ಕೊಟ್ಟಿದ್ದು ಅವರಿಗೆ ಗೊತ್ತು. ಆ ರೀತಿ ನೋಟೀಸು ಕೊಟ್ಟಿದ್ದಾರೆ ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. ಆ ನೋಟೀಸು ಪ್ರಕಾರ ಅಕ್ಕಪಕ್ಕದ ಜಮೀನುನವರು ಅಳತೆ ಮಾಡುವಾಗ ಹಾಜರು ಇರಬೇಕು ಅಂತ ಹೇಳಿ ನೋಟೀಸು ಕೊಟ್ಟಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನೋಟೀಸು ನಲ್ಲಿ ಕೆ ಎಸ್ ದಾಸಪ್ಪನ ಸಹಿ, ಕರಿಯಪ್ಪನ ಎಡಗೈ ಎಬ್ಬಟ್ಟು ಇದೆಯಾ ಎಂದರೆ ನನಗೆ ಗೊತ್ತಿಲ್ಲ. ಆ ನೋಟೀಸು ಪ್ರಕಾರ ಚೆಕ್ ಬಂದಿ ಕೂಡ ಕೊಟ್ಟಿದ್ದಾರೆ ಎಂದರೆ ನನ್ನ ತಂದೆಗೆ ಚೆಕ್ ಬಂದಿ ಗೊತ್ತು ನನಗೆ ಗೊತ್ತಿಲ್ಲ. ಸರ್ವೆ ರೆಕಾರ್ಡ ನಲ್ಲಿ ಇರುವ ಚೆಕ್ ಬಂದಿ ಬೇರೆ ಮತ್ತು ನನ್ನ ದಾವಾದಲ್ಲಿ ಇರುವ ಚೆಕ್ ಬಂದಿ ಬೇರೆ ಎಂದರೆ ನಾವು ಸಾಗುವಳಿ ಮಾಡುತಿದ್ದ ಚೆಕ್ ಬಂದಿ ನಮ್ಮ ಪತ್ರದ ಪ್ರಕಾರ ಇದೆ ಎಂದು ಹೇಳುತ್ತಾರೆ. ಆ ನೋಟೀಸು ಗೆ ಯಾರ್ಯಾರು ಸರ್ವೆ ಮಾಡಿದ್ದಾರೆ ಎಂದು ಹೇಳಲು ಆಗುತ್ತಾ ಎಂದರೆ ಇಲ್ಲ. ಆ ನೋಟೀಸುನಲ್ಲಿ ಮಹಜರ ಕೂಡ ಮಾಡಿದ್ದಾರೆ ಮತ್ತು ಕೆ ಎಸ್ ದಾಸಪ್ಪ ಅಂತ ತಂದೆ ಹೆಸರು ಕೂಡ ನೋಟೀಸಿನಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇರೀತಿ ಮಹಜರ ಗೆ ಯಾರ್ಯಾರು ಸಹಿ ಮಾಡಿದ್ದಾರೆ ಹೇಳಲು ಆಗುತ್ತಾ ಎಂದರೆ ಇಲ್ಲ. ಮಹಜರ ಬಂದಾಗ ನಾನು ಮತ್ತು ನನ್ನ ತಂದೆ ಸ್ಥಳಕ್ಕೆ ಹೋಗಿದ್ದೀರಾ ಎಂದರೆ ಹೌದು. ಮಹಜರ ಗೆ ಸಹಿ ನನ್ನ ತಂದೆ ಮಾಡಿರಬಹುದು ನಾನು ಮಾಡಿಲ್ಲ. ಸರ್ವೇ ರೆಕಾರ್ಡ ಪ್ರಕಾರ ಸರ್ವೆನಂ.340/1 ರಲ್ಲಿ

ಕರಿಯಪ್ಪ ಬಿನ್ ಬಡಕರಿಯಪ್ಪ 1 ಎಕರೆ 7 ಗುಂಟೆ ವಿಸ್ತೀರ್ಣ ಹೊಂದಿದ್ದಾರೆ ಎಂದರೆ 340 ರಲ್ಲಿ ಇಲ್ಲ ಆದರೆ ಪೋಡ್ ಆದ ನಂತರ ಆಗಿರುತ್ತದೆ ಅಂತ ಹೇಳುತ್ತಾರೆ. ಸರ್ವೆ ನಂ.340/1 ರಲ್ಲಿ ಒಟ್ಟು ವಿಸ್ತೀರ್ಣ 10 ಎಕರೆ 23 ಗುಂಟೆ ಇರುತ್ತದೆ. ಇದರಲ್ಲಿ 1 ಎಕರೆ 7 ಗುಂಟೆ ಕರಿಯಪ್ಪನಿಗೆ ಸೇರಿದ್ದು ಮತ್ತು 9 ಎಕರೆ 16 ಗುಂಟೆ ಕೆ ಎಸ್ ದಾಸಪ್ಪನಿಗೆ ಸೇರಿತ್ತು ಎಂದರೆ ಹೌದು. ಸರ್ವೆ ರೆಕಾರ್ಡ ಆಕಾರ್ ಬಂದ್ ನಲ್ಲಿ ಈ ಬಗ್ಗೆ ನಮೂದು ಇದೆ ಎಂದರೆ ನೋಡಿಲ್ಲ. ತಾಲ್ಲೂಕು ಕಚೇರಿಯಲ್ಲಿ ವಾದಿ ತನ್ನ ಹೆಸರಿಗೆ ವಿಲ್ ಆಗಿದೆ ಖಾತೆ ಮಾಡಬಾರದು ಅಂತ ಈ ಕೇಸಿನ ವಾದಿ ತಕರಾರು ಮಾಡಿರುತ್ತಾರೆ ಎಂದರೆ ಇಲ್ಲ. ತಹಶಿಲ್ದಾರವರು ದಿಃ29.11.2021 ರಂದು ಸರ್ವೆನಂ.340/2 ಆಸ್ತಿಗೆ 9 ಎಕರೆ 16 ಗುಂಟೆ ಆಸ್ತಿಗೆ ಮಾನ್ಯ ಸೀನಿಯರ್ ಸಿವಿಲ್ ಜಡ್ಜ ವಿಬಾಗದಲ್ಲಿ ಈ ಬಗ್ಗೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಇಲ್ಲ. ಆ ಕಾಲಕೆ ಈ ಕೇಸು ಚಾಲ್ತಿಯಲ್ಲಿತ್ತು ಎಂದರೆ ಗೊತ್ತಿಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಈ ಕೇಸು ಚಾಲ್ತಿಯಲ್ಲಿದ್ದರಿಂದ ಖಾತೆ ಮಾಡಲು ಬರಲ್ಲ ಅಂತ ಆರ್ ಆರ್ ಟಿ 202/2021.22 ಆದೇಶ ದಲ್ಲಿ ಹೇಳಿದ್ದಾರೆ ಎಂದರೆ ಗೊತ್ತಿಲ್ಲ. ತಹಶೀಲ್ದಾರವರ ಆದೇಶದ ವಿರುದ್ದ ಎಸಿ ನ್ಯಾಯಾಲಯಕ್ಕೆ ವಾದಿ ಆದೇಶ ಪ್ರಶ್ನೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ನನ್ನ ತಂದೆ ಪೌತಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡಿದ್ದರಿಂದ ನಮ್ಮ ತಾಯಿ, ತಂಗಿ, ತಮ್ಮ ಮತ್ತು ನನ್ನನ್ನು ಪಾರ್ಟಿ ಮಾಡಿದ್ದರು ಎಂದರೆ ಹೌದು. ಈ ಕೇಸಿನ ಪ್ರತಿವಾದಿಯರು ಕೂಡ ಆ ಎಸಿ ನ್ಯಾಯಾಲಯದಲ್ಲಿ ಹಾಕಿದ ಕೇಸಿನಲ್ಲಿ ಪಾರ್ಟಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದಲ್ಲೂ ಕೂಡ ಈ ಕೇಸು ಚಾಲ್ತಿಯಲ್ಲಿರುವುದರಿಂದ ಆದೇಶ ಮಾಡಲು ಬರಲ್ಲ ಅಂತ ಆದೇಶ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಲ್ ಆದಾಗಿನಿಂದ ವಾದಿಯೇ ಮಾಲೀಕರು ಮತ್ತು ಸ್ವಾದೀನದಾರರು ಎಂದರೆ ಸರಿಯಲ್ಲ. ಕ್ರಯಪತ್ರಕ್ಕೆ ವಾದಿಯಾಗಲೀ ಮತ್ತು ಅವರ ಕುಟುಂಬದವರಿಗೆ ಬಂದನಕಾರಿಯಾಗಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಮೂಲಕ ನಾವು ಮಾಲೀಕರಲ್ಲ ಎಂದರೆ ಸರಿಯಲ್ಲ. ತಕರಾರಿನಲ್ಲಿ ಹೇಳಿದ ವಿಷಯ ಮತ್ತು ಪ್ರಮಾಣಪತ್ರದಲ್ಲಿ ಹೇಳಿದ ವಿಷಯ ಬೇರೆ ಎಂದರೆ ಸರಿಯಲ್ಲ. ವಾದಿಗೆ ವಿನಾ ಕಾರಣ ನಾವು ಆಸ್ತಿ ಖರೀದಿ

ಮಾಡಿದ್ದೇವೆ ಅಂತ ಹೇಳಿಕೊಂಡು ತೊಂದರೆ ಕೊಡುತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ಆಗುವ ಮೊದಲೇ ವಿಲ್ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**